ಈ ಬೆಂಗಳೂರು ಮಹಾನಗರದಲ್ಲಿನ ಶ್ವಾನಗಳಿಗೆ ಇಷ್ಟೊಂದು ಧೈರ್ಯವಿರುತ್ತದೆಂದು ನನಗೆ ಖಂಡಿತವಾಗೂ ಗೊತ್ತಿರಲಿಲ್ಲ. ಎದುರಿನಲ್ಲೇ ವಾಹನ ನುಗ್ಗಿ ಬರುತ್ತಿದ್ದರೂ ಡೋಂಟ್ ಕೇರ್ ಎಂಬಂತೆ ಬಿಡುಬೀಸಾಗಿ ತಮ್ಮ ಪಾಡಿಗೆ ಅಡ್ಡಾಡುತ್ತಿರುತ್ತವೆ. ಕೆಲವೊಮ್ಮೆ ಹಾರನ್ನು ಬಾರಿಸಿದರೂ ಕಿರುಗಣ್ಣಿನಲ್ಲಿಯೇ ಒಮ್ಮೆ ಗುರಾಯಿಸಿ, 'ಹೋಗಯ್ಯಾ... ಕಂಡಿದ್ದೀನಿ' ಎಂಬಂತೆ ನೋಡಿ ಸುಮ್ಮನಾಗುತ್ತವೆ. ತೀರಾ ಬೇಸರವಾದಾಗೊಮ್ಮೆ ನಡು ಬೀದಿಯಲ್ಲೇ ಬಾಲ ಮುದುರಿ ಕುಳಿತುಬಿಡುತ್ತವೆ. ಇತ್ತೀಚೆಗೆ ಮನುಷ್ಯರ ಮೇಲೆ ಅದೇನು ಕೋಪವೋ... ತಾತ್ಸಾರವೋ ಗೊತ್ತಾಗುತ್ತಿಲ್ಲ. ನಮಗೂ ಮನುಷ್ಯನಿಗೂ ಏನೇನೂ ಸಂಬಂಧವಿಲ್ಲವೆಂಬಂತೆ ಮುಖ ತಿರುಗಿಸಿಕೊಂಡು ಓಡಾಡುತ್ತಿವೆ. ಒಂದು ಕಾಲದಲ್ಲಿ ಮನುಷ್ಯನಿಗೂ ಶ್ವಾನಗಳಿಗೂ ಇದ್ದಂಥ ಆ ಅವಿನಾಭಾವ ಸಂಬಂಧವೇ ಬುಡಮೇಲಾದಂತೆ ವರ್ತಿಸುತ್ತಿರುವ ಈ ಶ್ವಾನ ಮಹಾರಾಜರುಗಳನ್ನು ಕಂಡು ನನಗೆ ಸಖೇದಾಶ್ಚರ್ಯಗಳುಂಟಾಗಿರುವುದಂತೂ ನಿಜ.

ಹುಟ್ಟಿನಿಂದ ಕಿತಾಪತಿ ಬುದ್ಧಿಯವನಾದ ನಾನು ಕೆಲವೊಮ್ಮೆ ಗಾಡಿ ಓಡಿಸುವಾಗ ಬೇಕಂತಲೇ ಅವುಗಳ ಹತ್ತಿರ ತೆಗದುಕೊಂಡು ಹೋಗಿದ್ದಿದೆ. ಅವುಗಳನ್ನು ಬೆಚ್ಚಿ ಬೀಳಿಸಿ ಗೊಂದಲವುಂಟಾಗುವಂತೆ ಮಾಡಲು ಯತ್ನಿಸಿದ್ದಿದೆ. ಆ ಮೂಲಕ ಅವುಗಳ ಗಮನವನ್ನು ನನ್ನೆಡೆ ಸೆಳೆಯಲು ವಿಫಲ ಯತ್ನ

